
# ಮೈಸೂರು ಶ್ರೀರಾಮಕೃಷ್ಣ ಆಶ್ರಮ ನಡೆದು ಬಂದ ದಾರಿ

ಬ್ರ. ವಿವಿಕ್ತಚೈತನ್ಯ



**ಮೈಸೂರು** ತಾಯಿ ಚಾಮುಂಡೇಶ್ವರಿಯು ನೆಲೆಸಿರುವ ಪುಣ್ಯಭೂಮಿ. ಧರ್ಮ, ಕಲೆ, ಸಾಹಿತ್ಯ ಮತ್ತು ಸಂಗೀತಗಳ ತವರೂರು. ಕಾವೇರಿಯ ಕೃಪೆಯಿಂದ ಸಮೃದ್ಧವಾಗಿರುವ ನೆಲ. ಅದರಿಂದ ಸಂತೃಪ್ತರಾಗಿರುವ ಜನ. ಇದು ಈ ನಾಡಿನ ಹೆಗ್ಗಳಿಕೆ. ಮಾದರಿ ರಾಜ್ಯವೆನಿಸಿದ್ದ ಮೈಸೂರು ಪ್ರಾಂತದ ರಾಜರ ಆವಾಸ ಸ್ಥಾನವಾಗಿದ್ದ ಈ ಊರು ಇಂದು ಕನ್ನಡ ನಾಡಿನ ಸಾಂಸ್ಕೃತಿಕ ರಾಜಧಾನಿ ಎನಿಸಿಕೊಂಡಿದೆ.

ಸ್ವಾಮಿ ವಿವೇಕಾನಂದರು ತಮ್ಮ ಮೈಸೂರು ಭೇಟಿಯ ನಂತರ ಈ ದೇಶದಲ್ಲಿ ತಾವು ಕೈಗೊಳ್ಳಬೇಕೆಂದಿರುವ ಧರ್ಮಜಾಗರಣದ ಮಹಾನ್ ಕಾರ್ಯದಲ್ಲಿ ಮೈಸೂರು ಕೂಡ ಒಂದು ಪ್ರಮುಖ ಕೇಂದ್ರವಾಗುವುದು ಎಂದು ಮನಗಂಡಿದ್ದರು. ಸ್ವಾಮೀಜಿಯವರು ತಮ್ಮ ಪ್ರಿಯಶಿಷ್ಯ ಅಳಸಿಂಗ ಪೆರುಮಾಳರಿಗೆ ಅಮೆರಿಕದಿಂದ ೧೮೯೪ನೇ ಇಸವಿ ಆಗಸ್ಟ್ ೨೧ರಂದು ಬರೆದ ಪತ್ರದಲ್ಲಿ **'ಕಾಲಕ್ರಮದಲ್ಲಿ ಮೈಸೂರು ನಮ್ಮ ಕಾರ್ಯದ ಒಂದು ಪ್ರಮುಖ ಕೇಂದ್ರವಾಗಲಿದೆ'** ಎಂದು ಬರೆಯುತ್ತಾರೆ.

**ಮೈಸೂರು ರಾಮಕೃಷ್ಣ ಆಶ್ರಮವು ತನ್ನದೇ ಆದ ಇತಿಹಾಸವನ್ನು ಹೊಂದಿದ್ದು ರಾಮಕೃಷ್ಣ ಮಹಾಸಂಘದ ಕಾರ್ಯವ್ಯಾಪ್ತಿಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಆಶ್ರಮದ ಇತಿಹಾಸದ ಬಗ್ಗೆ ಸಾಕಷ್ಟು ಮಾಹಿತಿ ಕೊಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿರುತ್ತಾರೆ ಬ್ರ. ವಿವಿಕ್ತಚೈತನ್ಯ.**

ಸ್ವಾಮಿ ವಿವೇಕಾನಂದರ ಆಗಮನದ ನಂತರ ರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು ೧೯೦೩ರಲ್ಲೂ ಸ್ವಾಮಿ ಅಭೇದಾನಂದರು ೧೯೦೬ರಲ್ಲೂ ಮೈಸೂರು ನಗರಕ್ಕೆ ಭೇಟಿಕೊಟ್ಟು, ಹಲವು ಪ್ರವಚನಗಳನ್ನು ನೀಡಿದರು. ಇದು ರಾಮಕೃಷ್ಣ ಆಂದೋಳನದ ಕಾರ್ಯ ಮೈಸೂರಿನಲ್ಲಿ ಆರಂಭವಾಗುವುದಕ್ಕೆ ನಾಂದಿಯಾಯಿತು. ಇವರಲ್ಲದೆ, ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಶಿವಾನಂದರು ಮತ್ತು ಸ್ವಾಮಿ ವಿಜ್ಞಾನಾನಂದರು ಕೂಡ ಮೈಸೂರಿಗೆ ಭೇಟಿಯಿತ್ತಿದ್ದಾರೆ.

## ಕಾರ್ಯಾರಂಭ

೧೯೧೭ರಲ್ಲಿ ಮೈಸೂರಿನ ಭಕ್ತವೃಂದ 'ರಾಮಕೃಷ್ಣಸಮಾಜ' ಎಂಬ ಸಂಸ್ಥೆಯನ್ನು ಆರಂಭಿಸಿದ್ದನ್ನು ಕಾಣುತ್ತೇವೆ. ಅದರ ಉದ್ದೇಶ 'ರಾಮಕೃಷ್ಣ ಆಂದೋಳನದ ಧ್ಯೇಯಗಳಲ್ಲಿ ಆಸಕ್ತಿ ಇರುವವರನ್ನೆಲ್ಲ ಒಂದುಗೂಡಿಸುವುದು ಹಾಗೂ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವಗಳನ್ನು ಆಚರಿಸುವುದು'. ಇದಲ್ಲದೆ ಹಿಂದುಳಿದ ಪಂಗಡದವರಾದ ಆದಿಕರ್ನಾಟಕ ಜನಾಂಗದ ಶ್ರೇಯೋಭಿವೃದ್ಧಿಗೂ ಹಲವಾರು ಕಾರ್ಯಕ್ರಮಗಳನ್ನು ಈ ಸಮಾಜ ಹಮ್ಮಿಕೊಂಡಿತ್ತು.

೧೯೨೫ರ ಆದಿಭಾಗದಲ್ಲಿ ಸ್ವಾಮಿ ಶ್ರೀವಾಸಾನಂದರು ಮೈಸೂರಿಗೆ ಬಂದರು. ಅವರು ಮುಂಚೆ ಡೆಪ್ಯುಟಿ ಕಮಿಷನರ್ ಆಗಿದ್ದರು. ನಂತರ ಶ್ರೀಮಾತೆ ಶಾರದಾದೇವಿಯವರ ಶಿಷ್ಯರಾಗಿ, ಅವರಿಂದಲೆ ಸಂನ್ಯಾಸ ಗ್ರಹಣ ಮಾಡಿದರು. ಅವರು ರಾಮಕೃಷ್ಣ ಸಮಾಜ ಆಯೋಜಿಸಿದ್ದ ಆದಿಕರ್ನಾಟಕರ ಸಮ್ಮೇಳನದಲ್ಲಿ ಭಾಷಣ ಮಾಡಿದರು. ಅವರ ಉಪಸ್ಥಿತಿಯು ಮೈಸೂರಿನಲ್ಲಿ ರಾಮಕೃಷ್ಣ ಮಹಾಸಂಘದ ಶಾಖೆಯೊಂದರ ಸ್ಥಾಪನೆಯಾಗಬೇಕು ಎಂಬ ಭಾವನೆ ಇಲ್ಲಿನ ಜನರಲ್ಲಿ ಮೂಡುವಂತಾಯಿತು. ಅದರಂತೆ ಗಣ್ಯವ್ಯಕ್ತಿಗಳ ಸಮಿತಿಯೊಂದು ರಚಿಸಲ್ಪಟ್ಟಿತು. ಸಾಹುಕಾರ ಡಿ. ಬನುಮಯ್ಯನವರು ಅದರ ಅಧ್ಯಕ್ಷರಾಗಿದ್ದರು. ಶ್ರೀ ಹೆಚ್.ಸಿ. ದಾಸಪ್ಪ ಮತ್ತು ಶ್ರೀ ಎಮ್.ಎಸ್. ಕೃಷ್ಣರಾವ್ ಕಾರ್ಯದರ್ಶಿಗಳಾಗಿದ್ದರು. ಇವರಲ್ಲದೆ ೨೮ ಜನ ಗಣ್ಯವ್ಯಕ್ತಿಗಳು ಇದರ ಸದಸ್ಯರಾಗಿದ್ದರು.

ಈ ಸಮಿತಿಯು ಒಂದು ಠರಾವನ್ನು ಪಾಸುಮಾಡಿ ರಾಮಕೃಷ್ಣ ಮಠದ ಶಾಖೆಯೊಂದು ಮೈಸೂರಿನಲ್ಲಿ ಆರಂಭವಾಗಬೇಕೆಂದು

ರಾಮಕೃಷ್ಣ ಮಹಾಸಂಘದ ಮುಖ್ಯ ಕೇಂದ್ರವಾದ ಬೇಲೂರು ಮಠದ ಅಧಿಕಾರಿಗಳಿಗೆ ಬೇಡಿಕೆ ಸಲ್ಲಿಸಿತು. ಆಗ ಮದ್ರಾಸಿನ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶರ್ವಾನಂದರ ಅವಿರತ ಪ್ರಯತ್ನದ ಫಲವಾಗಿ ಮೈಸೂರಿನ ಆಶ್ರಮ ಆರಂಭವಾಯಿತು. ಈ ಸಂದರ್ಭದಲ್ಲಿ ನಾಲ್ಕು ದಿನಗಳ ಕಾಲ ಪ್ರವಚನ ಮಾಲೆಯೊಂದು ಆಯೋಜಿತವಾಗಿತ್ತು. ಸ್ವಾಮಿ ನಿರ್ಮಲಾನಂದರು, ಸ್ವಾಮಿ ಶ್ರೀವಾಸಾನಂದರು ಮತ್ತು ಸ್ವಾಮಿ ಶರ್ವಾನಂದರು ರಾಜಯೋಗ, ಭಕ್ತಿಯೋಗ ಮುಂತಾದ ವಿಷಯಗಳ ಬಗ್ಗೆ ಪ್ರವಚನಗಳನ್ನು ನೀಡಿದರು. ಐದನೆಯ ದಿನ ಅಂದರೆ, ೧೧ನೆ ಜೂನ್ ೧೯೨೫ರ ಶುಭ ಪ್ರಾತರ್ಮುಹೂರ್ತದಲ್ಲಿ ಸ್ವಾಮಿ ಶರ್ವಾನಂದರು ಆಶ್ರಮ ಆರಂಭವಾಯಿತೆಂದು ವಿಧ್ಯುಕ್ತವಾಗಿ ಘೋಷಿಸಿದರು. ಹೀಗೆ ಮೈಸೂರಿನಲ್ಲಿ ರಾಮಕೃಷ್ಣ ಮಹಾಸಂಘದ ಕಾರ್ಯದ ಅಂಕುರಾರ್ಪಣವಾಯಿತು.

ಆಶ್ರಮದ ಪ್ರಥಮ ಅಧ್ಯಕ್ಷರಾಗಿ ಸ್ವಾಮಿ ಸಿದ್ಧೇಶ್ವರಾನಂದರು ನೇಮಕಗೊಂಡರು. ದಿವಾನ್ ಶೇಷಾದ್ರಿ ಐಯ್ಯರ್ ರಸ್ತೆಯಲ್ಲಿ (ನಂ.೩೧೩, ದಿವಾನ್ ರಸ್ತೆ, ಮೈಸೂರು-೧), ಮರಿಮಲ್ಲಪ್ಪ ಪ್ರೌಢಶಾಲೆಯ ಹತ್ತಿರದಲ್ಲಿದ್ದ ಒಂದು ಬಾಡಿಗೆಯ ಮನೆಯಲ್ಲಿ ಆಶ್ರಮ ಆರಂಭವಾಯಿತು. ಕೆಲ ಸಮಯದ ನಂತರ ಕೃಷ್ಣಮೂರ್ತಿಪುರದ ಬಾಡಿಗೆ ಮನೆಯೊಂದಕ್ಕೆ ಸ್ಥಳಾಂತರ ಹೊಂದಿತು. ೧೯೩೧ರಲ್ಲಿ ಮೈಸೂರು ಮಹಾರಾಜರ ಸಲಹೆಯ ಮೇರೆಗೆ ನಗರ ಪಾಲಿಕೆಯು ವಾಣಿವಿಲಾಸ ಮೊಹಲ್ಲದಲ್ಲಿ ೨ಎಕ್ರೆ ಜಾಗವನ್ನು ಕೊಟ್ಟಿತು. ಶ್ರೀ ಡಿ. ಬನುಮಯ್ಯನವರ ಅಧ್ಯಕ್ಷತೆಯಲ್ಲಿ ರಚನೆಗೊಂಡ 'ಕಟ್ಟಡ ಸಮಿತಿಯ' ಮೂಲಕ ಐದು ಸಾವಿರ ರೂಪಾಯಿಗಳ ದೇಣಿಗೆಯನ್ನು ಸಂಗ್ರಹಿಸಲಾಯಿತು. ಅದರಿಂದ ಒಂದು ಸಣ್ಣ ಕಟ್ಟಡವನ್ನು ನಿರ್ಮಿಸಲಾಯಿತು. ಈ ಸ್ಥಳಕ್ಕೆ ೧೯೩೧ರ ಫೆಬ್ರವರಿ ತಿಂಗಳಿನಲ್ಲಿ ಆಶ್ರಮವನ್ನು ಸ್ಥಳಾಂತರಿಸಲಾಯಿತು.

## ಆಶ್ರಮದೊಡನಿದ್ದ ಶ್ರೇಷ್ಠರು

ಆಶ್ರಮದ ಪ್ರಾರಂಭದ ದಿನಗಳಲ್ಲಿ ಉತ್ಸಾಹದಿಂದ ಮುಂದೆ ಬಂದು ಸಹಕರಿಸಿದ ಇತರ ಮಹಾನುಭಾವರೆಂದರೆ ವಿಖ್ಯಾತ ವಿದ್ವಾಂಸರಾದ ಶ್ರೀ ವಿ. ಸುಬ್ರಹ್ಮಣ್ಯ ಐಯ್ಯರ್, ಮೈಸೂರು ವಿಶ್ವವಿದ್ಯಾಲಯದ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಶ್ರೀ ಎ.ಆರ್. ವಾಡಿಯಾ, ಹಿರಿಯ ಸಾಹಿತಿ ಶ್ರೀ ನಾ. ಕಸ್ತೂರಿ ಮತ್ತಿತರರು. ಕನ್ನಡದ ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಕುವೆಂಪು ಅವರು ಆಶ್ರಮದೊಡನೆ ಇಟ್ಟುಕೊಂಡಿದ್ದ ಸಂಬಂಧ ದೀರ್ಘ ಕಾಲದ್ದು ಮತ್ತು ತುಂಬ ಆತ್ಮೀಯವಾದದ್ದು. ಅವರು ತಮ್ಮ ವಿದ್ಯಾರ್ಥಿದೆಸೆಯನ್ನು ಸುಮಾರು ಹದಿಮೂರು ವರ್ಷಗಳ ಕಾಲ ಅಂದಿನ ಅಧ್ಯಕ್ಷರಾದ ಸಿದ್ಧೇಶ್ವರಾನಂದಜಿಯವರ ಆರೈಕೆಯಲ್ಲಿ ಆಶ್ರಮದಲ್ಲೇ ಕಳೆದರು. ತಮ್ಮ ಆಗಿನ ಸವಿ ನೆನಪುಗಳನ್ನು ಕುವೆಂಪು ತಮ್ಮ 'ನೆನಪಿನ ದೋಣಿಯಲ್ಲಿ' ಎಂಬ ಗ್ರಂಥದಲ್ಲಿ ಬರೆದಿಟ್ಟಿದ್ದಾರೆ.ಇಷ್ಟೇ ಅಲ್ಲದೆ ಇನ್ನೂ ಅನೇಕ ಹಿರಿಯ ಕನ್ನಡ ಸಾಹಿತಿಗಳು ಆಶ್ರಮದ ನಿಕಟ ಸಂಪರ್ಕವನ್ನು ಹೊಂದಿದ್ದರು.

ಆಶ್ರಮವನ್ನು ಸೇರಿದ ಮೊದಲ ಬ್ರಹ್ಮಚಾರಿಯೆಂದರೆ ಇಂದು ರಾಮಕೃಷ್ಣ ಮಹಾಸಂಘದ ಅಧ್ಯಕ್ಷಪದವಿಯನ್ನು ಅಲಂಕರಿಸಿರುವ ಸ್ವಾಮಿ ರಂಗನಾಥಾನಂದಜಿ ಅವರು. ಅವರು ೧೯೨೬ರಲ್ಲಿ ಮೈಸೂರು ಆಶ್ರಮವನ್ನು ಸೇರಿ ೯ ವರ್ಷಗಳ ಕಾಲ ಇಲ್ಲಿ ಸೇವೆ ಸಲ್ಲಿಸಿದರು. ಪಾತ್ರೆಗಳನ್ನು ತೊಳೆಯುವುದು, ಅಡುಗೆ ಮಾಡುವುದು—ಮುಂತಾದ ಎಲ್ಲ ಕಾರ್ಯಗಳನ್ನೂ ಅವರು ಮಾಡಬೇಕಾಗಿತ್ತು.

## ವಿವಿಧ ಚಟುವಟಿಕೆಗಳು

ಪ್ರಾರಂಭದ ದಿನಗಳಿಂದ, ಆಶ್ರಮದ ಸ್ವಾಮಿಗಳು ಕರ್ನಾಟಕದ ಹಲವೆಡೆ ಪ್ರವಚನಗಳನ್ನು ನಡೆಸುತ್ತಿದ್ದರು. ವಿದ್ಯಾರ್ಥಿನಿಲಯಗಳಲ್ಲಿ, ತರಗತಿಗಳು ಆರಂಭಗೊಂಡವು. ಸಂತರ ಆಚಾರ್ಯರ ಜಯಂತಿಗಳನ್ನು ಆಚರಿಸಲಾಗುತ್ತಿತ್ತು ಮತ್ತು ಸಣ್ಣ ಗ್ರಂಥಾಲಯವೊಂದನ್ನು ತೆರೆಯಲಾಗಿತ್ತು. ಮೈಸೂರಿನ ಕಾರಾಗೃಹ ಮತ್ತು ಕ್ಷಯರೋಗ ಪರಿಹಾರ ಕೇಂದ್ರಗಳಲ್ಲಿನ ಜನರ ಸಲುವಾಗಿ ಸ್ವಾಮಿಗಳು ಅಲ್ಲಿಗೆ ಹೋಗಿ, ಪ್ರವಚನ ಮತ್ತು ಭಜನೆಗಳನ್ನು ನಡೆಸುತ್ತಿದ್ದರು.



ಆಶ್ರಮ ಈ ಕಟ್ಟಡದಲ್ಲಿ ಪ್ರಾರಂಭವಾಯಿತು

ಆಶ್ರಮದ ಇತಿಹಾಸದಲ್ಲಿನ ಮುಂದಿನ ಕೆಲವು ಮಹತ್ತ್ವದ ಘಟ್ಟಗಳೆಂದರೆ ೧೯೨೯ರಲ್ಲಿ ವಿದ್ಯಾರ್ಥಿಗಳಿಗಾಗಿ ವಸತಿ ಮಂದಿರವೊಂದನ್ನು ಆರಂಭಿಸಿದ್ದು, ೧೯೩೭ರಲ್ಲಿ ಶ್ರೀರಾಮಕೃಷ್ಣ ಮಂದಿರದ ಅಡಿಗಲ್ಲನ್ನು ಇಟ್ಟಿದ್ದು ಮತ್ತು ೧೯೩೪ರಲ್ಲಿ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳಿಗಾಗಿ ಅಧ್ಯಯನಕೇಂದ್ರವೊಂದನ್ನು ಆರಂಭಿಸಿದ್ದು. ಮೈಸೂರು ಮಹಾರಾಜರು ಇದಕ್ಕೆ ಸಹಾಯ ಮಾಡಿದರು. ಇಲ್ಲಿ ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರ, ಸಮಾಜಶಾಸ್ತ್ರ, ವಿವಿಧ ಧರ್ಮಗಳ ಅಧ್ಯಯನ ನಡೆಯುತ್ತಿತ್ತು. ಮೈಸೂರಿನ ಪ್ರಖ್ಯಾತ ವಿದ್ವಾಂಸರುಗಳು ಈ ಸಂನ್ಯಾಸಿಗಳಿಗೆ ಬೋಧಿಸುತ್ತಿದ್ದರು. ಅವರಲ್ಲಿ ಮುಖ್ಯರಾದವರು ಆಗಿನ ಬಹುದೊಡ್ಡ ಅದ್ವೈತ ವೇದಾಂತಿಗಳಾಗಿದ್ದ ಶ್ರೀ ವಿ.ಸುಬ್ರಹ್ಮಣ್ಯ ಐಯ್ಯರ್ ಅವರು. ಈ ಅಧ್ಯಯನ ಕೇಂದ್ರ ೧೯೪೨ರವರೆಗೆ ನಡೆಯಿತು.

೧೯೪೧ ಮೈಸೂರು ರಾಮಕೃಷ್ಣಾಶ್ರಮಕ್ಕೆ ಬಹು ಪ್ರಮುಖವಾದ ವರ್ಷ. ಪೊನ್ನಂಪೇಟೆಯ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಶಾಂಭವಾನಂದಜಿ ಅವರು ಆ ವರ್ಷ ಮೈಸೂರು ಆಶ್ರಮಕ್ಕೆ ಬಂದರು. ಅವರ ನೇತೃತ್ವದಲ್ಲಿ ಮೈಸೂರು ಆಶ್ರಮ ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಿತು. ಸ್ವಾಮೀಜಿಯವರು ಮೊದಲು ವಿಶಾಲವಾದ ಪ್ರಾರ್ಥನಾಮಂದಿರವನ್ನು ಕಟ್ಟಲು ಆರಂಭಿಸಿದರು.

ಗ್ರಂಥಾಲಯ ಮತ್ತು ವಾಚನಾಲಯದ ಸೌಕರ್ಯವನ್ನು ಬರುತ್ತಿದ್ದ ಭಕ್ತಾದಿಗಳಿಗೆ ಒದಗಿಸಿಕೊಟ್ಟರು. ನಿಂತುಹೋಗಿದ್ದ ಅಧ್ಯಯನ ಕೇಂದ್ರ ೧೯೪೯ರಲ್ಲಿ ಪುನಃ ಆರಂಭವಾಗಿ ೧೯೫೩ರ ತನಕ ನಡೆಯಿತು ೧೯೫೦ರಲ್ಲಿ ರಾಮಕೃಷ್ಣ ಮಹಾಸಂಘದ ಪ್ರಧಾನಕಾರ್ಯದರ್ಶಿಗಳಾಗಿದ್ದ ಸ್ವಾಮಿ ಮಾಧವಾನಂದಜಿಯವರು ಸುಂದರವಾದ ಪ್ರಾರ್ಥನಾಮಂದಿರವನ್ನು ಉದ್ಘಾಟಿಸಿದರು.

## ವಿದ್ಯಾಶಾಲೆಯ ಆರಂಭ

೧೯೪೩-೪೪ರ ಸುಮಾರಿಗೆ ಶಾಂಭವಾನಂದಜಿ ವಿದ್ಯಾರ್ಥಿಗಳಿಗಾಗಿ ಭವ್ಯವಾದ ವಸತಿಗೃಹವೊಂದನ್ನು ಕಟ್ಟಲು ಆರಂಭಿಸಿದರು. ಒಂಟಿಕೊಪ್ಪಲಿನ ರೈಲ್ವೇಕಾಲೋನಿಯ ಸಮೀಪದಲ್ಲಿ ೭೦ ಎಕ್ರೆಗಳಷ್ಟು ವಿಸ್ತಾರವಾದ ಜಾಗವನ್ನು ಬಹಳ ಪ್ರಯತ್ನಪಟ್ಟು ಅದಕ್ಕಾಗಿ ಪಡೆದರು. ಕಟ್ಟಡನಿರ್ಮಾಣಕ್ಕಾಗಿ ಹಣ ಸಂಗ್ರಹಿಸಲು ಬಹಳ ಶ್ರಮಪಟ್ಟರು. ೧೯೪೯ರಲ್ಲಿ ಆಗ ಭಾರತದ ಗವರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರು ಈ ವಿದ್ಯಾರ್ಥಿನಿಲಯದ ಉದ್ಘಾಟನೆಯನ್ನು ಮಾಡಿದರು. ಆ ನಿಲಯವೇ ಮುಂದೆ ವಸತಿಶಾಲೆಯಾಗಿ ಪರಿವರ್ತನೆ ಹೊಂದಿ, ಇಂದು ನಾಡಿನಾದ್ಯಂತ ಉತ್ತಮ ಶಿಕ್ಷಣಪ್ರದಾನಕ್ಕೆ ಪ್ರಸಿದ್ಧವಾಗಿರುವ ರಾಮಕೃಷ್ಣ ವಿದ್ಯಾಶಾಲೆಯಾಗಿ ಅಭಿವೃದ್ಧಿ ಹೊಂದಿತು.




ಶ್ರೀರಾಮಕೃಷ್ಣ ವಿದ್ಯಾಶಾಲೆ

ನಂದನವನವೆಂಬಂತೆ ಸುಂದರವಾದ ತೋಟಗಳು, ಆಟದ ಮೈದಾನಗಳು, ವ್ಯಾಯಾಮಶಾಲೆ, ಈಜುಕೊಳ, ಸುಸಜ್ಜಿತವಾದ ವಸತಿಗೃಹ, ಗ್ರಂಥಾಲಯ, ಭವ್ಯ ಪ್ರಾರ್ಥನಾಮಂದಿರ ಮತ್ತು ಸಭಾಗೃಹ—ಇವುಗಳಿಂದ ಕೂಡಿರುವ ಈ ವಿದ್ಯಾಶಾಲೆಯು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಪಡೆದಿದೆ. ಅದರ ಈಜುಕೊಳವನ್ನು ೧೯೫೭ರಲ್ಲಿ ಅಂದಿನ ಪ್ರಧಾನಿ ಜವಹರಲಾಲ ನೆಹರು ಅವರು ಉದ್ಘಾಟಿಸಿದರು.ಪಿ.ಯು.ಸಿ ವಿಭಾಗವನ್ನು ೧೯೭೯ರಲ್ಲಿ ಆರಂಭಿಸಲಾಯಿತು.

## ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಆರಂಭ.

ಸ್ವಾಮಿ ಶಾಂಭವಾನಂದರು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ಶಿಕ್ಷಕರಿಗೆ ತರಬೇತಿ ಕೊಡುವ ಒಂದು ಸಂಸ್ಥೆಯ



ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ

ಕನಸು ಕಂಡಿದ್ದರು. ಅದರ ಸಾಕಾರ ರೂಪವೇ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ. ದೇಶದಲ್ಲೇ ಈ ರೀತಿಯ ವಿಶಿಷ್ಟ ಸಂಸ್ಥೆ ಇನ್ನೊಂದಿಲ್ಲ. ಇದರ ಕಟ್ಟಡ ವಿಶಾಲವಾಗಿದ್ದು ೧೫೦ಕ್ಕೂ ಅಧಿಕ ಕೊಠಡಿಗಳನ್ನು ಹೊಂದಿದೆ. ಬಹು ರಮಣೀಯವಾದ ಪ್ರಶಾಂತವಾದ ವಾತಾವರಣವಿರುವ ಈ ಸಂಸ್ಥೆಯನ್ನು ದರ್ಶಿಸಿದವರು ಮರುಳಾಗದಿರರು. ಇದಕ್ಕೆ ೧೯೬೮ರಲ್ಲಿ ಮೊರಾರ್ಜಿ ದೇಸಾಯಿಯವರು ಅಸ್ತಿಭಾರ ಹಾಕಿದರು. ಸುಮಾರು ೩೦ ಲಕ್ಷ ರೂ.ಗಳ ವೆಚ್ಚದಲ್ಲಿ ಕಟ್ಟಲಾದ ಕಟ್ಟಡ ಪೂರ್ಣಗೊಂಡದ್ದು ೧೯೭೪ರಲ್ಲಿ. ಇದನ್ನು ಉದ್ಘಾಟಿಸಿದವರು ಆಗ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ವೀರೇಶ್ವರಾನಂದಜಿ ಅವರು. ಇಂದು ಈ ಸಂಸ್ಥೆಯಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಗೆ ಒತ್ತು ಕೊಟ್ಟಿರುವ ಬಿ.ಎಡ್ ತರಗತಿಗಳು ಮತ್ತು ಶಾಲಾಶಿಕ್ಷಕರಿಗಾಗಿ ೨ ತಿಂಗಳ ಡಿಪ್ಲಮೊ ತರಗತಿಗಳು ಕೂಡ ನಡೆಯುತ್ತವೆ. ಇದಲ್ಲದೆ ಕಾಲಕಾಲಕ್ಕೆ ವಿವಿಧ ವರ್ಗದ ಜನರಿಗಾಗಿ ಆಧ್ಯಾತ್ಮಿಕ ಶಿಬಿರಗಳು ನಡೆಯುತ್ತವೆ.

## ಪುಸ್ತಕ ಪ್ರಕಟನೆ

ಮೈಸೂರು ಆಶ್ರಮದ ಇನ್ನೊಂದು ಬಹು ಮುಖ್ಯ ಅಂಗವೆಂದರೆ ಕನ್ನಡ ಪುಸ್ತಕಗಳ ಪ್ರಕಾಶನ. ನಾಡಿನಾದ್ಯಂತ ಆಶ್ರಮದ ಧಾರ್ಮಿಕ ಪುಸ್ತಕಗಳು ಜನರ ಮೆಚ್ಚುಗೆಯನ್ನು ಪಡೆದಿವೆ. ಆಶ್ರಮದ ಪ್ರಾರಂಭಕ್ಕೆ ಮುಂಚೆಯೇ ಶ್ರೀರಾಮಕೃಷ್ಣ-ವಿವೇಕಾನಂದರ ಜೀವನ ಮತ್ತು ಬೋಧನೆಗಳನ್ನು ಒಳಗೊಂಡ ಪುಸ್ತಕಗಳನ್ನು ಆಗಿನ ಹಿರಿಯ ಸಾಹಿತಿಗಳು ಬರೆದು ಪ್ರಕಟಿಸಿದ್ದರು. ಅವರುಗಳ ಸಹಕಾರದಿಂದ ಪ್ರಕಾಶನ ಕಾರ್ಯ ಆಶ್ರಮದಿಂದ ಬೆಳೆಯಿತು. ಆಶ್ರಮ ಮೊದಲು ಪ್ರಕಟಿಸಿದ ಕನ್ನಡ ಗ್ರಂಥ ಸ್ವಾಮಿ ಪರಮಾನಂದರ ಇಂಗ್ಲಿಷ್ ಕೃತಿಯ ಅನುವಾದ 'ಭಕ್ತಿಮಾರ್ಗ', ಅನುವಾದಕರು ಶ್ರೀ ಬಿ. ವೆಂಕಣ್ಣನವರು. ರಾಷ್ಟ್ರಕವಿ ಕುವೆಂಪು ಅವರ 'ಸ್ವಾಮಿ ವಿವೇಕಾನಂದ'—ಈ ಪುಸ್ತಕವಂತೂ ತನ್ನ ಅದ್ಭುತ ಶೈಲಿ ಮತ್ತು ಭಾಷೆಯ ಓಜಸ್ಸಿನಿಂದ ಕನ್ನಡದ ಸಾಹಿತ್ಯ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿದೆ. ಹಲವು ತಲೆಮಾರುಗಳ ಓದುಗರು ಇದರಿಂದ ಸ್ಫೂರ್ತಿಯನ್ನು ಪಡೆದಿದ್ದಾರೆ. ಇಂದಿಗೂ ಇದು ಜನಾದರಣೀಯವಾಗಿದೆ. ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಬೋಧನೆಗಳನ್ನು ಹಲವಾರು ಬಗೆಯ ಹೊತ್ತಗೆಗಳನ್ನು

ಹೊರತರುವ ಮೂಲಕ ಆಶ್ರಮವು ಕನ್ನಡ ಜನತೆಯಲ್ಲಿ ಪ್ರಸಾರ ಮಾಡಿದೆ. ಉಪನಿಷತ್, ಭಗವದ್ಗೀತೆ ಮತ್ತು ಇತರ ಧರ್ಮಗ್ರಂಥಗಳನ್ನು ಸರಳ ಕನ್ನಡ ಅನುವಾದದೊಂದಿಗೆ ಪ್ರಕಟಿಸಿ ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಉಪಕಾರ ಮಾಡಿದೆ. ಶಂಕರಾಚಾರ್ಯರ ಮತ್ತು ಇತರರ ವೇದಾಂತ ಪ್ರಕರಣಗ್ರಂಥಗಳ ಅನುವಾದಗಳು ವೇದಾಂತದಲ್ಲಿ ಆಸಕ್ತರಾದ ಜನರ ಆದರವನ್ನು ಪಡೆದಿವೆ. ಸ್ತೋತ್ರಗಳ ಪಾರಾಯಣ ಮತ್ತು ಭಾಷ್ಯಸಹಿತವಾದ ಪುಸ್ತಕಗಳು ಪ್ರಸಿದ್ಧವಾಗಿವೆ. ಹಿಂದೂಧರ್ಮದ ಮೂಲತತ್ತ್ವಗಳನ್ನು ಯಾವ ಸಂಕುಚಿತ ಭಾವನೆಯೂ ಇಲ್ಲದೆ ಸರಳವಾಗಿ ವಿವರಿಸಿ ಹೇಳುವ ಗ್ರಂಥಗಳನ್ನು ಕೂಡ ಆಶ್ರಮ ಹೊರತಂದಿದೆ. ಇದಲ್ಲದೆ ಸಾಧುಸಂತರ ಜೀವನ ಮತ್ತು ಉಪದೇಶಗಳು, ಆಧ್ಯಾತ್ಮಿಕ ಸಾಧಕರಿಗೆ ಮಾರ್ಗದರ್ಶನವನ್ನು ಕೊಡುವ ಗ್ರಂಥಗಳು, ಮಕ್ಕಳ ಸಾಹಿತ್ಯ—ಇವೆಲ್ಲ ಆಶ್ರಮದ ಪುಸ್ತಕಗಳು ಎಲ್ಲರಿಗೂ ಬಹಳ ಪ್ರಯೋಜನಕಾರಿಯಾಗುವಂತೆ ಮಾಡಿದೆ. ಇದುವರೆಗೆ ೨೦೦ಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ.

ಮೈಸೂರು ಆಶ್ರಮದ ಪ್ರಕಾಶನ ವಿಭಾಗವನ್ನು ಕಟ್ಟಿ ಬೆಳೆಸಿದವರು ಸ್ವಾಮಿ ಸೋಮನಾಥಾನಂದರು. ಸುಮಾರು ೫ ದಶಕಗಳ ಕಾಲ ಅವರು ಈ ಕಾರ್ಯದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡು, ಕನ್ನಡ ಜನತೆಯ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಅನೇಕ ವರ್ಷಗಳ ಕಾಲ ತಾವೇ ಪುಸ್ತಕಗಳನ್ನು ಬರೆದು, ಕರಡು ಪ್ರತಿಗಳನ್ನು ತಿದ್ದಿ, ಪುಸ್ತಕಗಳ ರವಾನೆ ಕೆಲಸವನ್ನೂ ಮಾಡುತ್ತಾ ಏಕಾಂಗಿಯಾಗಿ ದುಡಿದ ಮಹಾಚೇತನ ಅವರು. ಅವರಿಂದಲೇ ರಾಮಕೃಷ್ಣ-ವಿವೇಕಾನಂದ-ಸಾಹಿತ್ಯ ಇಂದು ಕನ್ನಡನಾಡಿನಲ್ಲಿ ಎಲ್ಲ ಕಡೆ ತಲುಪಿದೆ. ಕನ್ನಡಿಗರು ಆ ಪುಸ್ತಕಗಳಲ್ಲಿ ಇರುವ ಉದಾತ್ತ ಭಾವನೆಗಳ ಪರಿಚಯ ಪಡೆದಿದ್ದಾರೆ. ರಾಮಕೃಷ್ಣ ಆಶ್ರಮದ ಪುಸ್ತಕಗಳನ್ನು ಓದುವ ಪ್ರತಿಯೊಬ್ಬರೂ ಸ್ವಾಮಿ ಸೋಮನಾಥಾನಂದರನ್ನು ಸ್ಮರಿಸಿಕೊಳ್ಳಬೇಕು. ಸ್ವಾಮೀಜಿಯವರು ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದ ಮತ್ತು ಅವರ ಸೋದರ ಸಂನ್ಯಾಸಿಗಳ ಜೀವನ ಚರಿತ್ರೆಗಳನ್ನು ಸರಳವಾದ ಕನ್ನಡದಲ್ಲಿ ಬರೆದಿದ್ದಾರೆ. ಅದಲ್ಲದೆ ಭಗವದ್ಗೀತೆ ಮತ್ತು ಉಪನಿಷತ್ತುಗಳ ಮೇಲಿನ ಅವರ ಪ್ರವಚನಗಳನ್ನು ಆಧಾರವಾಗಿ ಇಟ್ಟುಕೊಂಡು ರಚಿಸಿದ 'ಗೀತಾಭಾವಧಾರೆ' ಮತ್ತು 'ಉಪನಿಷತ್ ಭಾವಧಾರೆ'ಎಂಬ ಎರಡು ಹೆಬ್ಬೊತ್ತಿಗೆಗಳು ಅವರ ಸಾಹಿತ್ಯಸಾಧನೆಗೆ ಕಲಶಪ್ರಾಯದಂತಿವೆ. ಸ್ವಾಮಿಗಳು ತಮ್ಮ ಹಿಮಾಲಯ ಯಾತ್ರೆಯ ಅನುಭವವನ್ನು ವಿವರಿಸಿರುವ 'ಹಿಮಾಲಯ ಯಾತ್ರೆ' ಎಂಬ ಪುಸ್ತಕವನ್ನು ಕುವೆಂಪು ಅವರೇ ಹಾಡಿ ಹೊಗಳಿದ್ದಾರೆ. ಸ್ವಾಮಿ ಸೋಮನಾಥಾನಂದರ ಎರಡು ಮುಖ್ಯ ಸಾಧನೆಗಳೆಂದರೆ 'ಸ್ವಾಮಿ ವಿವೇಕಾನಂದರ ಸಂಪೂರ್ಣ ಕೃತಿಶ್ರೇಣಿ' ಯನ್ನು ಸ್ವಾಮಿ ವಿವೇಕಾನಂದರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ೧೦ ಸಂಪುಟಗಳಲ್ಲಿ ಹೊರತಂದಿದ್ದು ಮತ್ತು 'ಶ್ರೀರಾಮಕೃಷ್ಣ ವಚನವೇದ'ದ ಪ್ರಕಟನೆ.

"ಶ್ರೀರಾಮಕೃಷ್ಣ ಮಹಾಸಂಘವು ಜಗತ್ತಿಗೆ ಮಾಡಿರುವ ಮಹದುಪಕಾರಗಳಲ್ಲಿ ಒಂದು ಅದರ ಗ್ರಂಥಪ್ರಕಟನೆ. ಹಿಂದೂ ಧರ್ಮದ ಅಸ್ತಿಭಾರವಾದ ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರಗಳು ಮುಂತಾದುವುಗಳನ್ನು ಅತ್ಯಂತ ಪ್ರಮಾಣಭೂತವಾದ ರೀತಿಯಲ್ಲಿ, ಮುಖ್ಯವಾದ ಭಾಷ್ಯಗಳೊಂದಿಗೆ ಇಂಗ್ಲಿಷಿನಲ್ಲಿಯೂ ದೇಶಭಾಷೆಗಳಲ್ಲಿಯೂ ಅಚ್ಚುಕಟ್ಟಾಗಿ ಮುದ್ರಿಸಿ, ಆಕರ್ಷಕವಾದ ಬೆಲೆಗೆ ಮಾರುತ್ತಿರುವುದು ಸಾಮಾನ್ಯವಾದ ಪರೋಪಕಾರವಲ್ಲ. ಜೊತೆಗೆ ಪ್ರಾಚೀನ ಭಾರತದ ಋಷಿಚಿಂತನ ಸಮಸ್ತದ ಸಜೀವಭಾಷ್ಯಗಳಂತಿರುವ ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು, ಅವರ ಸತೀರ್ಥರು ಮತ್ತು ಶ್ರೀಮಾತೆಯವರ ಜೀವನಸಂದೇಶಗಳನ್ನು ಸತ್ಯಕ್ಕೆ ಸ್ವಲ್ಪವೂ ಅಪಚಾರವಾಗದ ರೀತಿಯಲ್ಲಿ ಪ್ರಕಟಿಸಿರುವುದು ಕೂಡ ಅಭಿನಂದನೀಯವಾದದ್ದು.



ಭಾರತದ ಇತರ ದೇಶಭಾಷೆಗಳಲ್ಲಿ ನಡೆದಿರುವ ಈ ಕೆಲಸದ ವ್ಯಾಪ್ತಿ ನನ್ನ ಅರಿವಿಗೆ ಮೀರಿದ್ದು. ಆದರೆ ಕನ್ನಡದ ಮಟ್ಟಿಗೆ ಹೇಳುವುದಾದರೆ ಪ್ರಸ್ಥಾನತ್ರಯದ ಮತ್ತು ಶ್ರೀರಾಮಕೃಷ್ಣ ಸಾಹಿತ್ಯದ ಸಮಸ್ತವೂ ಕನ್ನಡದಲ್ಲಿ ಉಪಲಬ್ಧವಾಗಿದೆ ಎಂದು ಧಾರಾಳವಾಗಿ ಹೇಳಬಹುದು. ನನ್ನಂತಹ ಜ್ಞಾನಪಕ್ಷಪಾತಿಗಳು ಮಾಡಬಹುದಾದ ಕೆಲಸವೆಂದರೆ ಸಮಸ್ತ ಕನ್ನಡನಾಡಿನ ಪರವಾಗಿ ಶ್ರೀರಾಮಕೃಷ್ಣಾಶ್ರಮವನ್ನು ಈ ಮಹತ್ತಾದ ಸಾಧನೆಗಾಗಿ ಅಭಿನಂದಿಸುವುದು. ಇದರಲ್ಲಿ ನನ್ನ ವೈಯಕ್ತಿಕ ಕೃತಜ್ಞತೆಯೂ ಸೇರಿದೆಯೆಂದು ಬೇರೆಯಾಗಿ ಹೇಳಲೇ ಬೇಕಾಗಿಲ್ಲವಷ್ಟೆ?

—ಡಿ.ವಿ. ಗುಂಡಪ್ಪ. (ಡಿ.ವಿ.ಜಿ)

## ಗ್ರಾಮೋದ್ಧಾರ ಕಾರ್ಯ

೧೯೩೪ನೇ ಇಸವಿಯಲ್ಲಿಯೇ ಆಶ್ರಮವು ಪಡುವಾರಹಳ್ಳಿ ಎಂಬ ಗ್ರಾಮದಲ್ಲಿ ಶಿಕ್ಷಣ, ನೈರ್ಮಲ್ಯ, ಆರೋಗ್ಯ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿತ್ತು ಎನ್ನುವುದು ಗಮನಿಸಬೇಕಾದ ವಿಷಯವಾಗಿದೆ. ಹಾಗೆಯೇ ಕುಂಬಾರಕೊಪ್ಪಲು ಎಂಬ ಗ್ರಾಮದಲ್ಲಿ ರಾತ್ರಿಶಾಲೆ, ಶಿಶುಕಲ್ಯಾಣ ಕೇಂದ್ರ, ಸಹಕಾರೀ ಬ್ಯಾಂಕುಗಳನ್ನು ಆಶ್ರಮದ ವತಿಯಿಂದ ಆಯೋಜಿಸಲಾಗಿತ್ತು. ಗ್ರಾಮಸ್ಥರ ಅನುಕೂಲಕ್ಕಾಗಿ ಪ್ರವಚನಗಳನ್ನು ಮತ್ತು ವಿವಿಧ ಉದ್ಯಮಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿತ್ತು. ೧೯೮೩ರಿಂದ ೧೯೯೬ರವರೆಗೆ ಚಾಮರಾಜನಗರ ಜಿಲ್ಲೆಯ ಹಲವು ಆದಿವಾಸಿ ಹಳ್ಳಿಗಳಲ್ಲಿ ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳನ್ನು ಆಶ್ರಮವು ನಡೆಸಿತು. ಹಾಗೆಯೇ ಬಿಳಿಗಿರಿರಂಗನ ಬೆಟ್ಟದ ತಪ್ಪಲಿನಲ್ಲಿರುವ ಬೂದಿಪಡಗ ಎಂಬ ಅತಿ ಹಿಂದುಳಿದ ಕುಗ್ರಾಮವೊಂದರಲ್ಲಿ ವ್ಯವಸಾಯ, ರೇಷ್ಮೆ ಸಾಕಾಣಿಕೆ, ತೋಟಗಾರಿಕೆ, ಮುಂತಾದ ಹಲವು ಗ್ರಾಮೋದ್ಯೋಗಗಳಲ್ಲಿ ಅಲ್ಲಿನ ಜನರಿಗೆ ಆಧುನಿಕ ವೈಜ್ಞಾನಿಕ ಪದ್ಧತಿಯನ್ನು ಉಪಯೋಗಿಸುವ ಬಗೆಯನ್ನು ತಿಳಿಸಿಕೊಡುವ ಕಾರ್ಯಕ್ರಮವನ್ನೂ ನಡೆಸಿತು. ೨೫ ಲಕ್ಷ ರೂ.ಗಳನ್ನು ಇದಕ್ಕೆ ಖರ್ಚು ಮಾಡಲಾಗಿದೆ.

ಹೀಗೆ ಮೈಸೂರಿನ ರಾಮಕೃಷ್ಣ ಆಶ್ರಮವು ರಾಮಕೃಷ್ಣ ಆಂದೋಲನದಲ್ಲಿ ಪ್ರಮುಖ ಭೂಮಿಕೆಯನ್ನು ವಹಿಸಿದೆ. ಜನವರಿ ೨೦೦೦ದಿಂದ ಆರಂಭಗೊಂಡ ವಿವೇಕಪ್ರಭ ಪತ್ರಿಕೆಯ ಅದ್ಭುತ ಯಶಸ್ಸೇ ಇದರ ದ್ಯೋತಕವಾಗಿದೆ. ಇದರ ೧೩,೦೦೦ಕ್ಕೂ ಹೆಚ್ಚಿನ ಪ್ರತಿಗಳು ಈಗಾಗಲೇ ವಿತರಣೆಯಾಗುತ್ತಿವೆ. ಮುಂಬರುವ ದಿನಗಳಲ್ಲೂ ಆಶ್ರಮವು ಕರ್ನಾಟಕದ ಜನಮಾನಸದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಯ ಸಂದೇಶವನ್ನು ಬಿತ್ತುವ ತನ್ನ ಪವಿತ್ರ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಮುಂದುವರಿಸುವುದರಲ್ಲಿ ಸಂದೇಹವಿಲ್ಲ.

❋

# ಮೈಸೂರಿನಲ್ಲಿ ದಿವ್ಯತ್ರಯರ ಜನ್ಮಶತಮಾನೋತ್ಸವಗಳು

## ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವ

೧೯೩೬ರಲ್ಲಿ ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಮೊದಲನೆಯ ದಿನವೇ (ಜನವರಿ ೮, ೧೯೩೬) ಪೂಜೆ ಮತ್ತು ಭಜನೆಗಳ ಜೊತೆಗೆ ೩,೫೦೦ ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಉತ್ಸವ ಒಂದು ತಿಂಗಳ ಕಾಲ ನಡೆಯಿತು. ಈ ಸಂದರ್ಭದಲ್ಲಿ ಮಹಿಳೆಯರ ದಿನ ಆಯೋಜಿಸಲಾಗಿದ್ದು ೫,೦೦೦ ಭಕ್ತೆಯರು ಇದರಲ್ಲಿ ಪಾಲ್ಗೊಂಡಿದ್ದರು.

## ಶ್ರೀಮಾತೆ ಶಾರದಾದೇವಿಯವರ ಜನ್ಮಶತಮಾನೋತ್ಸವ

೧೯೫೪-೫೫ರಲ್ಲಿ ಶ್ರೀಮಾತೆ ಶಾರದಾದೇವಿಯವರ ಜನ್ಮಶತಮಾನೋತ್ಸವವನ್ನು ಆಯೋಜಿಸಲಾಗಿತ್ತು. ಮಹಾರಾಣಿಯವರಾದ ಲಕ್ಷ್ಮೀವಿಲಾಸ ಸನ್ನಿಧಾನಂ ಅವರ ಅಧ್ಯಕ್ಷತೆಯಲ್ಲಿ ಮಹಿಳೆಯರ ಸಮಾಗಮವೊಂದು ಜರುಗಿತು. ಮಕ್ಕಳ ಸಮಾವೇಶದಲ್ಲಿ ರಾಜಕುಮಾರಿ ಗಾಯತ್ರೀದೇವಿಯವರು ಅಧ್ಯಕ್ಷತೆ ವಹಿಸಿದ್ದರು. ಆಗ ಅವರಿಗೆ ಕೇವಲ ಏಳು ವರ್ಷ ವಯಸ್ಸು. ಸಾರ್ವಜನಿಕ ಸಮಾರಂಭವು ಹಿರಿಯ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಲವಾರು ಗಣ್ಯ ವ್ಯಕ್ತಿಗಳು ಅಂದು ಭಾಷಣವನ್ನು ಮಾಡಿದರು.

## ಸ್ವಾಮಿ ವಿವೇಕಾನಂದರ ಜನ್ಮಶತಮಾನೋತ್ಸವ

೧೯೬೩- ೬೪ರಲ್ಲಿ ಸ್ವಾಮಿ ವಿವೇಕಾನಂದರ ಜನ್ಮಶತಮಾನೋತ್ಸವವನ್ನು ಅಖಿಲ ಕರ್ನಾಟಕ ಮಟ್ಟದಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರಬಂಧಸ್ಪರ್ಧೆಯ ಮೂಲಕ ಆಚರಿಸಲಾಯಿತು. ಶ್ರೀ ಮೊರಾರ್ಜಿ ದೇಸಾಯಿಯವರು ಸ್ಪರ್ಧಾವಿಜೇತರಿಗೆ ಬಹುಮಾನವನ್ನು ವಿತರಿಸಿದರು. ಆಗ ನಡೆದ ಸಾರ್ವಜನಿಕ ಸಮಾರಂಭದಲ್ಲಿ ರಾಷ್ಟ್ರಕವಿ ಕುವೆಂಪುರವರು ಭಾಷಣ ಮಾಡಿದರು.

